ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 415/2019

(ಪ್ರಾಸಾ-2 ಚಾಸಾ-2 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 16.12.2025

| | | |
|---|---|---|
| ಸಾಕ್ಷಿದಾರರ ಹೆಸರು | - | ಜಾನ್ ಪೀಟರ್ |
| ತಂದೆಯ ಹೆಸರು | - | ಅರುಣ್ |
| ವಯಸ್ಸು | - | 30 ವರ್ಷ, |
| ಉದ್ಯೋಗ | - | ಖಾಸಗಿ ಕೆಲಸ |
| ವಾಸ | - | ಕಿತ್ತಗನೂರು |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ಚಾಸಾ-1 ಇವರು ಪರಿಶಿಷ್ಟ ಜಾತಿಗೆ ಸೇರಿದವರು. ಅವರಿಬ್ಬರು ನಮ್ಮ ಮನೆಯ ಅಕ್ಕಪಕ್ಕದವರು. 2019 ರಲ್ಲಿ ಒಂದು ದಿನ ಸಂಜೆ 6 ಘಂಟೆ ಸಮಯದಲ್ಲಿ ನಾನು ಮನೆಯಲ್ಲಿ ಇದ್ದಾಗ ನನ್ನ ಮನೆಯ ಮುಂದೆ ನನ್ನ ಬುಲೆರೋ ಕಾರನ್ನು ನಿಲ್ಲಿಸಿದ್ದು ಆರೋಪಿಯು ತನ್ನ ಎರಟಿಗಾ ಕಾರನ್ನು ನನ್ನ ಮನೆಯ ಮುಂದೆ ಚಲಾಯಿಸಿ ನನ್ನ ಗಾಡಿಗೆ ಡಿಕ್ಕಿ ಹೊಡೆಸಿ ಜಖಂ ಮಾಡಿರುತ್ತಾರೆ. ನಾನು ಶಬ್ದ ಕೇಳಿ ಹೊರಗೆ ಬಂದು ನೋಡಲಾಗಿ ಆರೋಪಿ ಚಾಸಾ-1 ರವರನ್ನು ಅವಾಚ್ಯ ಶಬ್ದಗಳಿಂದ ಬೈದು ದೊಣ್ಣೆಯಿಂದ ಮತ್ತು ಕೈಯಿಂದ ಹೊಡೆದಿದ್ದು ಚಾಸಾ-1 ರವರ ಬೆನ್ನು ಮತ್ತು ನಾಲಿಗೆಗೆ ಗಾಯವಾಗಿರುತ್ತದೆ. ಯಾಕೆ ಡಿಕ್ಕಿ ಹೊಡೆಸಿದ್ದೀಯಾ ಎಂದು ನಾನು ಆರೋಪಿಯನ್ನು ಪ್ರಶ್ನೆ ಮಾಡಿದಾಗ ಆರೋಪಿ ನನಗೂ ಸಹ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ.

2. ಗಲಾಟೆ ಆದಾಗ ಚಾಸಾ-3 ರಿಂದ 7 ರವರು ಸಹ ಹಾಜರಿದ್ದರು. ಇದನ್ನು ಹೊರತು ಆರೋಪಿ ಬೇರೆನನ್ನು ಮಾಡಲಿಲ್ಲ ಹಾಗೂ ಬೇರೆನನ್ನೂ ಹೇಳಲಿಲ್ಲ.

3. ಆರೋಪಿ ಮತ್ತು ಚಾಸಾ-1 ರವರ ಮಧ್ಯೆ ಸೈಟಿನ ವಿಚಾರವಾಗಿ ಮೊದಲಿನಿಂದಲೂ ಮನಸ್ತಾಪವಿರುತ್ತದೆ. ನಂತರ ನಾವು ಠಾಣೆಗೆ ಹೋಗಿದ್ದು ಚಾಸಾ-1 ರವರು ಗಲಾಟೆಯ ಬಗ್ಗೆ ದೂರು ನೀಡಿದ್ದರು. ಸಾಕ್ಷಿ ಮು.ಮಾ-1 ದೊಣ್ಣೆಯನ್ನು ನೋಡಿ ಇದೇ ತರಹದ ದೊಣ್ಣೆ ಇತ್ತು ಎಂದು ಹೇಳುತ್ತಾರೆ.

4. ಗಲಾಟೆ ಆದ ಮರುದಿನ ಪೋಲಿಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ನನ್ನ ಸಹಿ ಪಡೆದರು. ಆಗ ಸ್ಥಳದಲ್ಲಿ ಚಾಸಾ-7 ಸಹ ಹಾಜರಿದ್ದು ಸಹಿ ಮಾಡಿರುತ್ತಾರೆ. ಸಾಕ್ಷಿ ನಿಶಾನೆ ಪಿ-2 ಪಂಚನಾಮೆ ನೋಡುತ್ತಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿ-2(ಬಿ) ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ಹೇಳಿಕೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

5. ಗಲಾಟೆ ಸಮಯದಲ್ಲಿ ಆರೋಪಿ ಚಾಸಾ-1 ಇವರಿಗೆ, ನೀನು ಹೊಲೆಯ ಮಾದಿಗ ನನ್ನ ಮಗ, ಇಲ್ಲಿ ಬೇರೆಯವರನ್ನು ಬಿಟ್ಟು ನನ್ನ ಮೇಲೆ ಗಲಾಟೆ ಮಾಡಿಸುತ್ತೀಯಾ ಎಂದು ಬೈದಿದ್ದು ಸೈಟನ್ನು ಕೊಡದಿದ್ದರೆ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದರು ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ದಿಃ15.05.2019 ರಂದು ಗಲಾಟೆ ಆಗಿದೆ ಎಂದರೆ ನೆನಪಿಲ್ಲ. 2019 ರಲ್ಲಿ ಗಲಾಟೆ ಆಗಿದೆ ಎಂದು ಹೇಳುತ್ತಾರೆ.

6. ನಿಪಿ-2 ರ ಪಂಚನಾಮೆ ಸಮಯದಲ್ಲಿ ಚಾಸಾ-1 ರವರು ತನಗೆ ಆರೋಪಿಯು ಹೊಡೆದ ಈಗ ತೋರಿಸಿದ ಮು.ಮಾ-1 ದೊಣ್ಣೆಯನ್ನು ಹಾಜರುಪಡಿಸಿದ್ದು ಪೋಲಿಸರು ಪಂಚನಾಮೆ ಸಮಯದಲ್ಲಿ ಅದನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಕೆ ವಕೀಲರಿಂದಃ</u>**

ಆರೋಪಿ ಪರ ವಕೀಲರು ತಮ್ಮ ಹಿರಿಯ ವಕೀಲರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇರುವುದಾಗಿ ಪಾಟೀ ಸವಾಲು ಮಾಡಲು ಕಾಲಾವಕೋಶ ಕೋರಿದ್ದು ಹಿರಿಯ ವಕೀಲರನ್ನು ಮಧ್ಯಾಹ್ನ 01.10 ಘಂಟೆ ನಿಮಿಷದವರೆಗೆ ಕಾದಿದ್ದು ಸುಮಾರು ಒಂದೂವರೆ ಘಂಟೆಗಳ ಕಾಲ ಸಾಕ್ಷಿಯು ಪಾಟೀ ಸವಾಲಿಗಾಗಿ ಕಾದಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು